ಚಂದ್ರಗುತ್ತಿ ಗ್ರಾಮದ ಶಿವಮೊಗ್ಗ ಜಿಲ್ಲೆಯಲ್ಲಿ ನಗ್ನ ಪ್ರದರ್ಶನದ ಬಗ್ಗೆ

೪೧೮ ಬಿ. ಬಸವಲಿಂಗಪ್ಪ, (ಯಲಹಂಕ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಚಂದ್ರಗುತ್ತಿ ಗ್ರಾಮ, ಸೊರಬ ಶಿವಮೊಗ್ಗ ಜಿಲ್ಲೆಯಲ್ಲಿ ದೇವರ ಹೆಸರಿನಲ್ಲಿ ಮಹಿಳೆಯರು ಮತ್ತು ಹುಡುಗಿಯರು ನಗ್ನ ಪ್ರದರ್ಶನ ಮಾಡುವ ಪದ್ಧತಿ ಇದೆಯೇ ?

೨. ಹೌದಾದಲ್ಲಿ ಇದು ಯಾವಾಗಲಿಂದ ಜಾರಿಗೆ ಬಂದಿದೆ.

೩. ಇಲ್ಲಿ ಯಾವ ಜಾತಿ ಮಂತ್ತು ವರ್ಗದವರು ನಗ್ನ ಪ್ರದರ್ಶನ ಮಾಡುತ್ತಾರೆ.

೪. ಈ ಮೂಢ ನಂಬಿಕೆಯನ್ನು ನಿಲ್ಲಿಸಲು ಸರ್ಕಾರದವರು ಪ್ರಯತ್ನವನ್ನು ಮಾಡಿದ್ದಾರೆಯೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

೧. ಹೌದು.

೨. ಇದು ಬಹುಶ: ಪುರಾತನ ಕಾಲದಿಂದ ಬಂದಿರುವ ವಾಡಿಕೆ. ಆದರೆ ಇದಕ್ಕೆ ಬಂದಿರುವ ನಿಗಧಿತ ಕಾಲ ಯಾವುದೆಂದು ಗೊತ್ತಿಲ್ಲ

೩. ಎಲ್ಲಾ ಕೋಮಿನ ಮಹಿಳೆಯರು ಮತ್ತು ಹುಡುಗಿಯರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ, ಹಿಂದುಳಿದ ಜನಾಂಗದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮಾತ್ರ ಬೆತ್ತಲೆ ಸೇವೆಯನ್ನು ಮಾಡುತ್ತಾರೆ.

೪. ಹೌದು,

೧. ಸಾಮಾಜಿಕ ಸಂಪ್ರದಾಯಗಳಿಂದ ಆಗುವ ತೊಂದರೆಯ ಬಗ್ಗೆ ವ್ಯಾಪಕ ಪ್ರಚಾರವನ್ನು ಈ ಇಲಾಖೆಯು ಕೈಕೊಂಡಿದೆ.

೨. ಈ ಜಾತ್ರೆಯ ಸಂದರ್ಭದಲ್ಲಿ ಸ್ಥಳೀಯ ಆರಕ್ಷಕರ ಮಹಿಳಾ ಮಂಡಲ ಮತ್ತು ಯುವತಿ ಮಂಡಲದವರಿಂದ ಕರಪತ್ರಗಳನ್ನು ಹಂಚುವ ಮುಖಾಂತರ ಸಾರ್ವಜನಿಕರಲ್ಲಿ ಒಳ್ಳೆಯ ತಿಳುವಳಿಕೆ ಮೂಡಲು ಹಾಗೂ ಮೂಢ ನಂಬಿಕೆಯನ್ನು ಹೋಗಲಾಡಿಸಿ, ಸಾಮಾಜಿಕ ಪ್ರಜ್ಞೆ ಬೆಳೆಯುವಂತೆ ಮಾಡಲಾಗಿದೆ.

೩. ಹಳ್ಳಿಗಳಲ್ಲಿ ಯುವ ಕೇಂದ್ರಗಳ ಮುಖಾಂತರ ಶಿಬಿರಗಳ ಸಂಘಟನೆಗಳನ್ನು ಏರ್ಪಾಡು ಮಾಡಲಾಗಿದೆ. ಜಿಲ್ಲಾ ಮಟ್ಟದ ಸಂಕೀರ್ಣಗಳನ್ನು ಚಂದ್ರಗುತ್ತಿಯಲ್ಲಿ ಅಲ್ಲದೆ ಅಕ್ಕಪಕ್ಕದ ಹಳ್ಳಿಗಳಾದ ಕುಪ್ಪಗುಡ್ಡ, ಜೆಡೆ, ಅಸವಟ್ಟಿ, ಮತ್ತು ಸೊರಬಗಳಲ್ಲಿ ನಡೆಸಲಾಗಿದೆ.

೪. ಇದರ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಬೀದಿ ನಾಟಕಗಳ ಮುಖಾಂತರ ತಿಳುವಳಿಕೆ ನೀಡಿರುತ್ತಾರೆ.

೫. ಕಳೆದ ವರ್ಷದಿಂದ ಈ ಜಾತ್ರೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಸಹಕಾರಿ ಮಿನಿಂ ಮಾರಾಟ ಮಂಡಳಿಗೆ ನೀಡಲಾಗಿರುವ ಸಾಲದ ಬಗ್ಗೆ

೨೨೯ ಶ್ರೀ ಜಿ, ಎಸ್, ಆಚಾರ್ (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ, ಮಂಗಳೂರು ಇವರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಮಂಡಳಿಗೆ ನೀಡಲಾಗಿರುವ ಸಾಲದ ವಸೂಲಾತಿಗೆ ಸರಕಾರ ನೀಡಿದ ಗ್ಯಾರಂಟಿ ಪ್ರಕಾರ ಬಹಳ ಹಿಂದೆಯೇ ಕ್ರಮ ತೆಗೆದುಕೊಂಡಿರುವುದು ನಿಜವೇ ?

೨. ಹಾಗಿದ್ದರೆ ಸಾಲ ಮರುಪಾವತಿಗೆ ಏಕೆ ವಿಳಂಬವಾಗಿದೆ ?

೩. ಸಾಲ ಮತ್ತು ಬಡ್ಡಿ ವಸೂಲಾತಿಗಾಗಿ ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—

೧. ಹೌದು

೨. ಎ.ಆರ್.ಸಿ. ಸಾಲದ ಮರುಪಾವತಿಯನ್ನು ಪುನರ್ ನಿರ್ಧರಿಸಲು (ರಿಶೆಡ್ಯೂಲಿಂಗ್) ಹಾಗೂ ಸದರಿ ಮೀನು ಮಾರಾಟ ಮಂಡಳಿಯನ್ನು ಪುನರ್ ಸಜ್ಜೀಕರಣಗೊಳಿಸುವ ವಿಷಯವು ಪರಿಶೀಲನೆಯಲ್ಲಿರುವುದರಿಂದ ಈ ಹಂತದಲ್ಲಿ ಸರಕಾರ ನೀಡಿರುವ ಗ್ಯಾರಂಟಿ ಅನ್ವಯ ಕ್ರಮ ಕೈಗೊಳ್ಳುವುದು ಅಕಾಲಿಕವೆಂದು ಪರಿಗಣಿಸಲಾಗಿದೆ.

೩. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಲಿ ಮಂಗಳೂರು ಇವರು ಎ.ಆರ್.ಸಿ. ಸಾಲದ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ೧೯೫೯ರ ಕಾಯಿದೆ ಕಲಂ ೬೦ ರನ್ವಯ ಅರ್ಬಿಟ್ರೇಶನ್ ಕೇಸುಗಳನ್ನು ದಾಖಲು ಮಾಡಿರುತ್ತಾರೆ. ಸದರಿ ಕೇಸು ಇಲಾಖೆಯ ಪಂಚಾಯತಿ ದಾರರ ಮುಂದೆ ವಿಚಾರಣೆಗೆ ಇರುತ್ತದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

೧) ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನ ಮುಂದಿರುವ ಈ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

೧೯೬೧ನೇ ಇಸವಿಯ ಕರ್ನಾಟಕ ಭೂ ಸುಧಾರಣಾ ಶಾಸನದ ೧೪೦ನೇ ಕಲುಮಿನ ಮೇರೆಗೆ.

ಹರಳಪುರ ಹಳ್ಳಿಯ ಹರಿಹರದ ಕಿರ್ಲೋಸ್ಕರ್ ಕಂಪೆನಿಯವರು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಹೊಂದಲು ಅನುಮತಿ ನೀಡುವ ಬಗ್ಗೆ ೧೩ನೇ ಸೆಪ್ಟೆಂಬರ್ ೧೯೮೭ ರಂದು ಹೊರಡಿಸಲಾದ ಆರ್. ಡಿ. ೧೫೯ ಎಲ್.ಆರ್.ಎಮ್ ೮೪ನೇ ಸಂಖ್ಯೆಯ ಅಧಿಸೂಚನೆಯನ್ನು

ಅ) ಬಿಜಾಪುರದ ದೇವಿ ಸಹಕಾರ ಸಂಘದವರು ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶ ಗಳಿಗಾಗಿ ಹೊಂದಲು ಅನುಮತಿ ನೀಡುವ ಬಗ್ಗೆ ದಿನಾಂಕ ೧೩ನೇ ಜೂನ್ ೧೯೮೭ ರಂದು ಹೊರಡಿಸ ಲಾದ ಆರ್. ಡಿ. ೨೦೯ ಎಲ್, ಆರ್. ಎಮ್ ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ

೨) ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿ)ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿ) .—ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ

೧೯೫೬ನೇ ಇಸವಿಯ ಕಂಪೆನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ

ಅ) ೧೯೮೫–೮೬ನೇ ಸಾಲಿನ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪೆನಿಯವರ ೨೩ನೇ ವಾರ್ಷಿಕ ವರದಿಯನ್ನು ಸದರಿ ಕಂಪೆನಿಯ ಕಾರ್ಯದ ಬಗ್ಗೆ ಒಂದು ಟಿಪ್ಪಣಿಯೊಂದಿಗೆ,

ಆ) ೧೯೮೪–೮೫ನೇ ಸಾಲಿನ ಕರ್ನಾಟಕ ಸೋಪು ಮತ್ತು ಮಾರ್ಜಕಗಳ ಕಂಪೆನಿಯ ಐದನೇ ವಾರ್ಷಿಕ ವರದಿಯನ್ನು ಸದರಿ ಕಂಪೆನಿಯ ಕಾರ್ಯದ ಬಗ್ಗೆ ಒಂದು ಟಿಪ್ಪಣಿಯೊಂದಿಗೆ, ಹಾಗೂ

ಇ) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ನಿಗಮಕ್ಕೆ ಸಂಬಂಧಿಸಿದ ೧೯೮೫–೮೬ನೇ ಸಾಲಿನ ವಾರ್ಷಿಕ ವರದಿ ಹಾಗೂ ೮೪–೮೫ನೇ ಸಾಲಿನ ಆಡಿಟ್ ವರದಿಯನ್ನು ಸಭೆಯ ಮುಂದಿಡುತ್ತೇನೆ.

೩) ಶ್ರೀ ಎಂ. ಪಿ, ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿ) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ,

೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೨೦ನೇ ಕಲುಮಿನ ಮೇರೆಗೆ ಬೆಂಗಳೂರಿನ ಇಂಡಿಯನ್ ಫೊಟೋಷ್ ಲಿಮಿಟೆಡ್ ಸಂಸ್ಥೆಯು ಪ್ರದರ್ಶಿಸುವ ಚಲನಚಿತ್ರ ಪ್ರದರ್ಶನಕ್ಕೆ